# ಪರಿಪಕ್ವವಲ್ಲದ ಪಾಕ–ತನನಂ ತನನಂ

- ಕರ್ನಾಟಕದ ಯಾವ ಮಲೆನಾಡಿನ ಯಾವ ಹಳ್ಳಿಯಲ್ಲಿ ಯಾವ ಶಾನುಭಾಗ ತನ್ನ ಬೆಳೆದ ಮಗಳು ದಾವಣಿಯಿಲ್ಲದ ಹೊಕ್ಕಳು ಕಾಣಿಸುವಂತಹ ಲಂಗ–ರವಿಕೆ ಹಾಕಿಕೊಂಡಿರಲು ಬಿಡುತ್ತಾನೆ ಹೇಳಿ? ಬೆಂಗಳೂರಿನ ಪ್ರತಿಷ್ಠಿತ ವಸ್ತ್ರಾಲಂಕಾರ ಪರಿಣತರು ವಿನ್ಯಾಸ ಮಾಡಿದಂತಹ 'ರೂರಲ್ ಲುಕ್ಸ್' ಇರುವ ಬಟ್ಟೆಗಳನ್ನು ತೊಟ್ಟಿರುವ ನಟರೊಂದಿಗೆ 'ರೂರಲ್ ಸಬ್ಜೆಕ್ಟ್' ಇರುವ **'ತನನಂ ತನನಂ'** ಚಿತ್ರ ಮಾಡಿದ್ದಾರೆ **ಕವಿತಾ ಲಂಕೇಶ್**. ಒಂದು ಗ್ರಾಮೀಣ ಪ್ರದೇಶದ ಚಿತ್ರ ಮಾಡುವಾಗ ಅಲ್ಲಿನ ಉಡುಗೆ ತೊಡುಗೆಗಳ ಬಗ್ಗೆ ಒಂದು ಕನಿಷ್ಟ ಮಾತ್ರದ ಸಂಶೋಧನೆ, ಅಧ್ಯಯನ, ವಸ್ತ್ರ ವಿನ್ಯಾಸಗಾರರಿಗೆ ಬೇಡವೇ?
- ಚಿತ್ರದ ತುಂಬ ಭಾರತಿ, ರಮ್ಯ, ರಕ್ಷಿತಾ ಮುಂತಾದವರು ಹಾಕಿಕೊಂಡಿರುವುದು ಮತ್ತದೇ ಪ್ರತಿಷ್ಠಿತ 'ಡಿಸೈನರ್' ಆಭರಣಗಳನ್ನು. ಅದೂ ದೃಶ್ಯದಿಂದ ದೃಶ್ಯಕ್ಕೆ ಬದಲಾಗುವ ಆಭರಣಗಳು! ಅಷ್ಟೆಲ್ಲ ತರಹದ ಒಡವೆ–ವಸ್ತ್ರಗಳು 'ರೂರಲ್ ಸಬ್ಜೆಕ್ಟ್'ನ 'ನೇಟಿವಿಟಿ'ಗೆ ಧಕ್ಕೆ ತರುತ್ತವೆ ಅನ್ನುವುದು ಕವಿತಾರವರಿಗೆ ಗೊತ್ತಾಗಲಿಲ್ಲವೇ?
- ಇಡೀ ಚಿತ್ರದ ಅತೀ ದೊಡ್ಡ ಶತ್ರು ಎಂದರೆ ಸಂಕಲನ. ಇಡೀ ಚಿತ್ರದಲ್ಲಿ ಹಗಲು ಇರುಳುಗಳ ವ್ಯತ್ಯಾಸವಾಗಲೀ ಸಮಯವಾಗಲೀ ಗೊತ್ತಾಗುವುದೇ ಇಲ್ಲ. ಒಂದು ಹಗಲು ಶುರುವಾದ ದೃಶ್ಯ ಹಟಾತ್ತನೇ ಕೂಡಿಕೊಳ್ಳುವುದು ರಾತ್ರಿಯ ವೇಳೆಗೆ.
- ಚಿತ್ರದ ಮೊದಲಲ್ಲಿ, ಕಾರಣಾಂತರಗಳಿಂದ ತನ್ನ ವಯೋಲಿನ್ ಸಾಧನೆಯನ್ನು ನಿಲ್ಲಿಸಿ ಗುರು–ಸೋದರ ಮಾವ ಗಿರೀಶ್ ಕಾರ್ನಾಡ್ ವಯೋಲಿನ್‌ಗಳನ್ನು ಸಂದೂಕದೊಳಕ್ಕೆ ಮುಚ್ಚಿಟ್ಟು ಅದರ ಕೀಲಿ ಕೈಯನ್ನು ದೇವಸ್ಥಾನದ ಪುಷ್ಕರಣಿಯೊಳಕ್ಕೆ ಎಸೆದಿರುತ್ತಾನೆ. ಅದೇ ಕೀಲಿ ಕೈಯನ್ನು ಹುಡುಕಲು; ಗುರುವನ್ನು ವಯೋಲಿನ್ ಕಲಿಸುವಂತೆ ಒತ್ತಾಯಿಸಲು, ನಾಯಕ ಅದೇ ಪುಷ್ಕರಣಿಯೊಳಕ್ಕೆ ಇಳಿಯುತ್ತಾನೆ. ತುಂಟಿ(!) ರಮ್ಯ ಅವನನ್ನು ಪುಷ್ಕರಣಿಯಲ್ಲಿ ಬಿಟ್ಟು, ಅವನೆಲ್ಲ ಬಟ್ಟೆ ತೆಗೆದುಕೊಂಡು ಮನೆಗೆ ಬಂದಿರುತ್ತಾಳೆ. ದಿನ ಸಂಜೆಯಾಗಿ, ರಾತ್ರಿಯಾಗಿ, ಮನೆಯಲ್ಲಿ ರಾತ್ರಿಯ ಹೊತ್ತು ಕೃಷ್ಣಾಷ್ಟಮಿಯ (ಅಥವಾ ದೀಪಾವಳಿಯೇ?) ಸಡಗರ, ಜೊತೆಗೆ ಚಿತ್ರದ ಮೊಟ್ಟ ಮೊದಲ ಹಾಡು. ಹಾಡು ಮುಗಿದು (ಊಟವೂ ಮುಗಿದು?) ಗಿರೀಶ್ ಕಾರ್ನಾಡ್ ಒಬ್ಬನೇ ಹಜಾರದಲ್ಲಿ ಕುಳಿತಿರುವಾಗ ನಾಯಕ ಸೊಂಟಕ್ಕೆ ಬಾಳೆಲೆ ಅಡ್ಡ ಹಿಡಿದುಕೊಂಡು ಕಳ್ಳ ಹೆಜ್ಜೆಯಲ್ಲಿ ಮನೆಯೊಳಕ್ಕೆ ಬರುತ್ತಾನೆ. ಅಲ್ಲೀತನಕ ಹಬ್ಬದ ಸಡಗರದಲ್ಲಿ ಮನೆಯವರಿಗೆ ತಮ್ಮ ಮನೆಗೆ ಹೊಸದಾಗಿ ಬಂದಿರುವ ಈ ಅತಿಥಿಯೊಬ್ಬನ ಗೈರು ಹಾಜರಿ ಗೊತ್ತೇ ಆಗಿರುವುದಿಲ್ಲವೇ? ರಮ್ಯ ಅವನನ್ನು ಪುಷ್ಕರಣಿಯಲ್ಲಿ ಬರೀ ಮೈಯಲ್ಲಿ ಬಿಟ್ಟು ಬಂದಾಗ ಮಟ–ಮಟ ಮಧ್ಯಾಹ್ನ. ಅಲ್ಲಿಂದ ರಾತ್ರಿಯ ವರೆಗೂ ನಾಯಕ ಪುಷ್ಕರಣಿಯ ನೀರಿನೊಳಗೇ ಇದ್ದನೇ? ಅವನ ನಂತರ ಊರಿನ ಬೇರೆ ಯಾರೂ ಪುಷ್ಕರಣಿಗೆ ಬಂದಿರಲಿಲ್ಲವೇ (ಹಬ್ಬದ ದಿನ)?
- ನನಗೆ ಭಯಂಕರ ಕಿರಿಕಿರಿಯಾದದ್ದು ಚಿತ್ರದ ಎರಡನೇ ಹಾಡು, ಮತ್ತು ಅದು ತುರುಕಲ್ಪಟ್ಟ ರೀತಿ! ಮೊದಲನೇ ಹಾಡು ತಿರುಗಿಕೊಂಡ ಪರಿಯನ್ನು ಕಂಡೇ ಸ್ವಲ್ಪ ಅಸಮಧಾನಗೊಂಡಿದ್ದ ನನಗೆ ಎರಡನೇ 'ಸೌತೆಕಾಯಿ' ಹಾಡು ಬಂದ ಕೂಡಲೇ ಕವಿತಾರವರ ಉದ್ದೇಶ ಸ್ಪಷ್ಟವಾಯಿತು! ಇದು ಅಪ್ಪಟ ವ್ಯಾವಹಾರಿಕ ದೃಷ್ಟಿಯುಳ್ಳ ಚಿತ್ರ. ಇನ್ನೆಲ್ಲ ಹಾಡು 'ಕ್ಲಾಸಿಕ್' ಸ್ಪರ್ಶದವಿದ್ದರೆ ಇದು 'ಮಾಸ್ ಅಪೀಲ್' ಇರುವ ಹಾಡು! ಇಲ್ಲಿಂದ ಮುಂದಕ್ಕೆ ಚಿತ್ರ ಎಡವುತ್ತಲೇ ಸಾಗುತ್ತದೆ. ಅತ್ತ 'ಶಾಸ್ತ್ರೀಯ'ವೂ ಆಗದೇ ಇತ್ತ ಅಪ್ಪಟ 'ಮಸಾಲಾ'ವೂ ಆಗದೇ ತ್ರಿಶಂಕುವಿಗೆ ದೊರಕದ ಸ್ವರ್ಗದಂತಾಗಿಬಿಡುತ್ತದೆ.
- 'ಎಲ್. ಸುಬ್ರಹ್ಮಣ್ಯ'ರ ವಯೋಲಿನ್ ವಾದನವನ್ನು ಚಿತ್ರದಲ್ಲಿ ಬಳಸಿಕೊಂಡಿದ್ದೇವೆ ಅಂತೆಲ್ಲ ಪ್ರಚಾರ ಮಾಡಿದವರಿಗೆ ಅದನ್ನು ಸರಿಯಾಗಿ ದುಡಿಸಿಕೊಳ್ಳಲೂ ಬಂದಿಲ್ಲ. ಸುಬ್ರಹ್ಮಣ್ಯರವರು ಈ ಚಿತ್ರಕ್ಕೋಸ್ಕರ ಪ್ರತ್ಯೇಕವಾಗಿ ವಯೋಲಿನ್ ಮುದ್ರಣ ಮಾಡಿದಂತೆ ಕಾಣುವುದಿಲ್ಲ. ಅವರವೇ ಮುದ್ರಣದ ಹಳೆಯ ಕೆಲವು ಭಾಗಗಳನ್ನು ತೆಗೆದುಕೊಂಡು ಬೇಕಾಬಿಟ್ಟಿಯಾಗಿ ತುರುಕಿದ್ದಾರೆ, ಅವುಗಳ ಧ್ವನಿ ಗ್ರಹಣವೂ ಚೆನ್ನಾಗಿಲ್ಲ. ಹಾಗಾಗಿ ವಯೋಲಿನ್ ವಾದನದ ದೃಶ್ಯ ಬಂದಾಗಲೆಲ್ಲ 'ಧ್ವನಿ ಮುದ್ರಣ'ದ ಸ್ತರವೇ ಬದಲಾಗಿ ಅದು 'ಗ್ರಾಮಾಫೋನ್'ನ ಧ್ವನಿಯಂತೆ ಕೇಳಿಬರುತ್ತದೆ.

ಅಲ್ಲಿಗೆ ಆನಂದ ಭೈರವಿ, ಮಲಯ ಮಾರುತದಂತೆ ಇದೊಂದು ಸಂಗೀತಮಯ ಚಿತ್ರವೆಂಬ ಭ್ರಮೆಯೂ ದೂರವಾಗುತ್ತದೆ.

- ವಯೋಲಿನ್ ವಾದನದ ಚಿತ್ರೀಕರಣವೂ ಕೆಟ್ಟದಾಗಿ ಮೂಡಿಬಂದಿದೆ. ಅವಸರ ಅವಸರವಾಗಿ ಶುರುವಾಗುವ ವಯೋಲಿನ್ ನಿಮಿಷಾರ್ಧದಲ್ಲಿ ಧೃತಕ್ಕೇರಿ, ಕಛೇರಿಯೂ ಮುಗಿದುಬಿಡುತ್ತದೆ. ವಯೋಲಿನ್ ಕುಯ್ಯುವ ಕೈಗಳ ಚಿತ್ರೀಕರಣವಂತೂ ಎಷ್ಟು ಬಾಲಿಶವಾಗಿದೆ ಎಂದರೆ, ವಯೋಲಿನ್ ನಾದ-ಸ್ವರ ಎಲ್ಲಿಂದಲೋ ಹೊರಡುತ್ತಿರುತ್ತದೆ, ಕೈಗಳು ಎಲ್ಲೋ ಹರಿದಾಡುತ್ತಿರುತ್ತವೆ... ('ಸನಾದಿ ಅಪ್ಪಣ್ಣ'ದಲ್ಲಿ ಡಾ. ರಾಜ್ ಶಹನಾಯಿ ನುಡಿಸಿದ್ದು ನೆನಪಿಸಿಕೊಳ್ಳಿ)
- ಹಳ್ಳಿಯ ಸೋದರ ಮಾವನ ಮನೆಗೆ ವಯೋಲಿನ್ ಕಲಿಯಲು ಬಂದಿರುವ ನಾಯಕ-ನಟ ಅದೇ ಹಳ್ಳಿಗೆ ಬಂದ ನಾಟಕದ ಕಂಪನಿಯ ನಟಿ ರಕ್ಷಿತಾಳ ಮೋಹಕ್ಕೆ ಬೀಳುತ್ತಾನೆ. ಆಮೇಲೆಲ್ಲ ಅವನದೇ ಆರ್ತನಾದ. ಇಡೀ ಊರಿನ ಜನರ ಮುಂದೆ ಮುಂದೆ ಅವನು ಮಾಡುವ ಅಪಸವ್ಯಗಳೆಲ್ಲ (ಮಗಳನ್ನು ಇವನಿಗೇ ಕೊಟ್ಟು ಮದುವೆ ಮಾಡಬೇಕೆಂದುಕೊಂಡಿರುವ) ಗುರು-ಸೋದರಮಾವನಿಗೆ ಗೊತ್ತಾಗುವುದಿಲ್ಲವೇ? ಅಥವಾ ಅದೆಲ್ಲ ತರಲೆ ಅಷ್ಟೊಂದು ಗುರುತರವಲ್ಲ ಎಂದು ಎಲ್ಲರೂ ಸುಮ್ಮನಾಗಿ ಬಿಡುತ್ತಾರೆಯೇ?
- ನಾಟಕಗಳೆಲ್ಲ ಮುಗಿದು ಇಡೀ ತಂಡ ಐದಾರು ಗಾಡಿಗಳಲ್ಲಿ ನಾಟಕದ ಸೆಟ್ಟುಗಳ ಸಮೇತ ಹಳ್ಳಿಯಿಂದ ಹೊರಟು ಹೋದರೂ ಈ ಹಳ್ಳಿಯಲ್ಲಿ ಅವರು ಹಾಕಿದ್ದ ನಾಟಕದ ಸ್ಟೇಜು, ಸಭಿಕರು ಕೂರಲು ಹಾಕಿದ್ದ ಮರದ ಅಟ್ಟಣಿಗೆಗಳು, ಕಡು ನೀಲಿಯ ಹಿಮ್ಮುಖ ಪರದೆ (ಜೊತೆಗೆ ಆ ಎಲ್ಲ ದೀಪಾಲಂಕಾರ?) ಎಲ್ಲವೂ ಹಾಗೇ ಇರುತ್ತದೆ, ನಾಟಕದವರು ಎಲ್ಲವನ್ನೂ ಹಾಗೇ ಬಿಟ್ಟು ಹೋಗಿರುತ್ತಾರೆ-ಪ್ರೇಕ್ಷಕರ ಹೃದಯ ಹಿಂಡುವಂತಹ, ನಾಯಕನ ವ್ಯರ್ಥಾಲಾಪಕ್ಕೆ ವೇದಿಕೆಯಾಗಿ(!)
- ಇನ್ನಾದರೂ ಕನ್ನಡ ಚಿತ್ರರಂಗ, ಕುಡಿದು ಚಿತ್ತಾದ ನಾಯಕನಿಗೆ ರಾತ್ರಿಹೊತ್ತು ಲಾರಿ ('ಉದ್ಯಾನವನವೊಂದರ ದೊಡ್ಡದಾದ ಖಾಲೀ ಸಮತಟ್ಟು ರಸ್ತೆಯಲ್ಲಿ ರಾತ್ರಿ ಬರುತ್ತಿರುವ ಲಾರಿ' ಎಂದು ಬೇಕಾದರೆ ಓದಿಕೊಳ್ಳಿ!) ಗುದ್ದಿ ಅಪಘಾತವಾದರೆ ಚಿತ್ರದ ಅನುಕೂಲಕ್ಕೆ ತಕ್ಕಂತೆ ಕಣ್ಣು-ಕಾಲು, ಕಿವಿ, ಮೂಗು, ಬಾಯಿ(ಮಾತು), ನೆನಪು ಹೊರಟು ಹೋಗುತ್ತದೆಯೆಂಬ ಅಸಂಬದ್ಧ ತತ್ವವನ್ನು ಚಿತ್ರದ ಅತೀ ಮುಖ್ಯ ತಿರುವನ್ನಾಗಿ ಉಪಯೋಗಿಸಿಕೊಳ್ಳುವುದನ್ನು ನಿಲ್ಲಿಸಬೇಕು. (ಅಲ್ಲೈ ಪಾಯುದ್ಯೆ ಚಿತ್ರದ ಅಪಘಾತದ ಚಿತ್ರೀಕರಣ ನೆನಪಿಸಿಕೊಳ್ಳಿ!)
- ಸೂಕ್ಷ್ಮತೆ, ವಿವರಗಳಿಗೆ ನಿರ್ದೇಶಕರಾದಿಯಾಗಿ ಯಾರೂ ಕಣ್ಣು ತೆರೆದಿಲ್ಲ. ಅವರ ಮೊದಲ ಎರಡು ಚಿತ್ರಗಳನ್ನು ನೋಡಿ, **'ತನನಂ ತನನಂ'** ನೋಡಿದರೆ **God is in details** ಎಂಬುದು ಕವಿತಾ ಲಂಕೇಶರಿಗೆ ಮರೆತು ಹೋಗಿದೆಯೆಂಬುದು ಗೊತ್ತಾಗುತ್ತದೆ. ಈಗ ಅವರ ತಲೆಯಲ್ಲಿರುವುದು ಕೇವಲ 'ಫಾರ್ಮುಲಾ ಸಿನೆಮಾ'ದ ಸರಕುಗಳು.
- ಒಂದು ಸುಂದರ ಚಿತ್ರ ಕಾವ್ಯವಾಗಬಹುದಾಗಿದ್ದ, ಹಾಗಾಗಿಯೂ ಕೂಡಾ ವ್ಯಾವಹಾರಿಕವಾಗಿ ಗೆಲ್ಲಬಹುದಾಗಿದ್ದ ಒಂದು ಸಾಮಾನ್ಯ ಕತೆಯನ್ನೇ ಅಸಾಮಾನ್ಯ ಮಾಡಲು ಹೋಗಿ ಕವಿತಾ ಎಡವಿದ್ದಾರೆ. ಎಲ್ಲ ಮಸಾಲೆಯನ್ನೂ ಹದವಾಗಿ ಬೆರೆಸಿ, ನಿರ್ಮಾಪಕರು ಹಾಕಿದ ದುಡ್ಡು ವಾಪಸ್ಸು ಬರುವ ಹಾಗೆ ಮಾಡಿಯೇ ಬಿಡುತ್ತೇನೆ ಎಂಬ ಹುಂಬ ಧೈರ್ಯದಲ್ಲಿ ತಾಳ-ಮೇಳವಿಲ್ಲದ **'ತನನಂ ತನನಂ'** ಚಿತ್ರ ಮಾಡಿ ಸೋತಿದ್ದಾರೆ.

(ಚಿತ್ರ ಬಿಡುಗಡೆಯಾದ ಶನಿವಾರದಂದೇ ನನ್ನಮ್ಮನೊಂದಿಗೆ ಹೋಗಿ **'ತನನಂ ತನನಂ'** ನೋಡಿದ್ದೆ. ಆಗಿಂದಲೂ ಇದನ್ನೆಲ್ಲ ಬರೆದು ಬಿಡಲೇ ಬೇಕು, ನಿಮ್ಮನ್ನೆಲ್ಲ ಎಚ್ಚರಿಸಲೇ ಬೇಕು ಎಂದುಕೊಂಡವನು ಈಗ ಬರೆಯುತ್ತಿದ್ದೇನೆ, ಹಾಗಾಗಿ ನಿಮ್ಮಲ್ಲಿ ಎಷ್ಟೋ ಜನರನ್ನು ಹಿಂಸೆಯಿಂದ ತಪ್ಪಿಸುವದರಲ್ಲಿ ವಿಫಲನಾಗಿದ್ದೇನೆ(!) ಅದಕ್ಕಾಗಿ ಕ್ಷಮೆಯಿರಲಿ)

**ಹ್ಯಾವ್ ಎ ನೈಸ್ ಡೇ**

**ಶಿವಕುಮಾರ ಕೆ. ಎಸ್.** ks_shivu@yahoo.com